C.R.P.67

| Form No.4 (Criminal) Deposition Sheets (R.P.No.57) |
| --- |

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 256/2019

**ಚಾಸಾ– 17 ಪ್ರಾ.ಸಾ– 12**

**ಸಾಕ್ಷಿದಾರರ ಹೆಸರು** **ಡಿ.ಸಿ ರಾಮಸ್ವಾಮಿ**

**ತಂದೆಯ ಹೆಸರು** **ಲೇಟ್ ಚಿಕ್ಕಹನುಮಯ್ಯ**

**ವಯಸ್ಸು** **60 ವರ್ಷಗಳು**

**ಉದ್ಯೋಗ** **ಅಸಿಸ್ಟೆಂಟ್ ಎಂಜಿನಿಯರ್, ಪಿ ಡಬ್ಲ್ಯೂ ಡಿ ಮಂಡ್ಯ**

**ವಾಸ** **ಮಂಡ್ಯ**

**ದಿನಾಂಕಃ 10.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನಾನು 2012 ರಿಂದ ಇಲ್ಲಿಯವರಗೆ ಅಸಿಸ್ಟೆಂಟ್ ಎಂಜಿನಿಯರ್ ಆಗಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್ ರವರ ಕಛೇರಿ, ಪಿ.ಡಬ್ಲ್ಯೂ.ಡಿ ಉಪ ವಿಭಾಗ, ಮಂಡ್ಯ ದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ31.08.2019 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಈ ಪ್ರಕರಣದ ಕೃತ್ಯ ಸ್ಥಳದ ನಕ್ಷೆ ತಯಾರಿಸಲು ಕೋರಿಕೆಯನ್ನು ನಮ್ಮ ಇಲಾಖೆಗೆ ನೀಡಿದ್ದರು, ಸದರಿ ಕೋರಿಕೆ ಪತ್ರದ ಕಛೇರಿ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–21** ಎಂದು ಗುರುತಿಸಲಾಗಿದೆ. ನನ್ನ ಮೇಲಾಧಿಕಾರಿಗಳಾದ ಎಇಇ ರವರು ಕೃತ್ಯ ಸ್ಥಳದ ನಕ್ಷೆಯನ್ನು ತಯಾರಿಸಲು ನನ್ನನ್ನು ನೇಮಿಸಿ ಕಳುಹಿಸಿದ್ದು ಅದರಂತೆ ದಿಃ21.09.2019 ರಂದು ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಯ ಪೋಲೀಸ್ ಸಿಬ್ಬಂದಿ ಕೆ.ಕಾಳಯ್ಯರವರು ನನ್ನನ್ನು ಮಂಡ್ಯ ಸಿಟಿ ಗಾಂಧಿನಗರ 5ನೇಕ್ರಾಸ್ ವಾರ್ಡ್ ನಂ.13 ರಲ್ಲಿರುವ ಸ್ವತ್ತಿನ ಸಂಖ್ಯೆಃ13–2–134–70ಎ ಪುಟ್ಟಮಾದಯ್ಯ ಬಿನ್ ಲೇಟ್ ಕಾಳಯ್ಯ ಇವರ ವಾಸದ ಮನೆಯ

ಬಳಿ ಕರೆದುಕೊಂಡು ಹೋಗಿದ್ದು ಸದರಿಯವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟಂತೆ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-22** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-22(ಎ)** ಎಂದು ಗುರುತಿಸಲಾಗಿದೆ.

3. ದಿಃ09.09.2019 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಈ ಪ್ರಕರಣದ ಕೃತ್ಯ ಸ್ಥಳದ ಮನೆಗೆ ಉಂಟಾಗಿರುವ ನಷ್ಟದ ಅಂದಾಜನ್ನು ಪರಿಶೀಲನೆ ಮಾಡಿ ಪಟ್ಟಿಯನ್ನು ತಯಾರಿಸಿ ನೀಡಲು ಕೋರಿಕೆಯನ್ನು ನಮ್ಮ ಇಲಾಖೆಗೆ ನೀಡಿದ್ದರು, ಸದರಿ ಕೋರಿಕೆ ಪತ್ರದ ಕಛೇರಿ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-23** ಎಂದು ಗುರುತಿಸಲಾಗಿದೆ. ನನ್ನ ಮೇಲಾಧಿಕಾರಿಗಳಾದ ಎಇಇ ರವರು ಸದರಿ ನಷ್ಟದ ಅಂದಾಜು ಪಟ್ಟಿಯನ್ನು ತಯಾರಿಸಲು ನನ್ನನ್ನು ನೇಮಿಸಿ ಕಳುಹಿಸಿದ್ದು ಅದರಂತೆ ನಕ್ಷೆಯನ್ನು ತಯಾರಿಸಲು ಹೋದ ದಿನಾಂಕ ದಿಃ21.09.2019 ರಂತೆ ಸದರಿ ಸ್ಥಳ ಪರಿಶೀಲನೆ ಮಾಡಿದಾಗ ಸ್ಥಳದಲ್ಲಿ ಸಿಮೆಂಟಿನ ಸಾಲಿಡ್ ಬ್ಲಾಕಿನಿಂದ ನಿರ್ಮಿಸಿದ್ದ ಗೋಡೆ ಕುಸಿದು ಬಿದ್ದಿದ್ದು ಅದರ ಅಳತೆಯನ್ನು ತೆಗೆದು ನಾನು ಅಂದಾಜು ನಷ್ಟದ ಪಟ್ಟಿಯನ್ನು ತಯಾರಿಸಿರುತ್ತೇನೆ. ಸದರಿ ಪಟ್ಟಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-24** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-24(ಎ)** ಎಂದು ಗುರುತಿಸಲಾಗಿದೆ. ಸದರಿ ಅಂದಾಜು ಪಟ್ಟಿಯಂತೆ ಸುಮಾರು ರೂ.67,707/- ರಷ್ಟು ನಷ್ಟ ಉಂಟಾಗಿರುವುದಾಗಿ ಕಂಡುಬಂದಿರುತ್ತದೆ. ಕೃತ್ಯ ಸ್ಥಳದ ನಕ್ಷೆಯನ್ನು ಮತ್ತು ಅಂದಾಜು ಪಟ್ಟಿಯನ್ನು ನಾನು ನಮ್ಮ ಮೇಲಾಧಿಕಾರಿಗಳಿಗೆ ನೀಡಿದ್ದು ಸದರಿಯವರು ಅವರ ಕವಚಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತಾರೆ, ಸದರಿ ಕವಚ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-25** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ:**

1. ನಾನು ಸ್ಥಳಕ್ಕೆ ಭೇಟಿ ಮಾಡುವ ಪೂರ್ವದಲ್ಲಿ ಸ್ವತ್ತಿನ ಸಂಖ್ಯೆ13-2-134-70ಎ ರ ಮಾಲೀಕರು ಯಾರು ಎಂದು ನಾನು ನಗರಸಭೆಯಿಂದ ಇರುವ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಪೋಲೀಸರು ನನಗೆ ಸದರಿ ಸ್ವತ್ತಿನ ಮಾಲೀಕರ ಹೆಸರು ಇರುವ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಸ್ಥಳ ಪರಿಶೀಲನೆ ಮಾಡುವ ಸಮಯದಲ್ಲಿ ಸ್ಥಳದಲ್ಲಿಯೂ ಸಹಾ ನಾನು ಸದರಿ ಸ್ವತ್ತಿನ ಮಾಲೀಕರು

ಯಾರು ಎಂದು ತೋರಿಸುವ ನಗರಸಭೆಯ ಯಾವುದೇ ದಾಖಲೆಗಳು ಇ–ಖಾತ ವಗೈರೆಗಳನ್ನು ನೋಡಿರುವುದಿಲ್ಲ. ನಿಪಿ–22 ನಕ್ಷೆಯಲ್ಲಿ ಸ್ಥಳದಲ್ಲಿ ಯಾವುದೇ ಕಟ್ಟಡ ಕುಸಿದು ಬಿದ್ದು ನಷ್ಟ ಉಂಟಾಗಿರುವ ಬಗ್ಗೆ ನಮೂದಿಸಿರುವುದಿಲ್ಲ. ನಾನು ಆ ದಿನ ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳದಲ್ಲಿ ಯಾವುದೇ ಮನೆಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿರುವ ಬಗ್ಗೆಯಾಗಲೀ ನಕ್ಷೆ ತಯಾರಿಸುವ ಬಗ್ಗೆಯಾಗಲೀ ಮತ್ತು ಅಂದಾಜು ಪಟ್ಟಿ ತಯಾಸಿರುವ ಬಗ್ಗೆಯಾಗಲೀ ಯಾವುದೇ ಛಾಯಚಿತ್ರಗಳನ್ನು ತೆಗೆದಿರುವುದಿಲ್ಲ. ಸದರಿ ಸ್ವತ್ತು ಪುಟ್ಟಮಾದಯ್ಯ ಬಿನ್ ಲೇಟ್ ಕಾಳಯ್ಯ ರವರದು ಎಂದು ತೋರಿಸುವ ಯಾವುದೇ ದಾಖಲೆಗಳು ಕಡತದಲ್ಲಿ ಲಭ್ಯವಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಹಾಗೂ ಪಿರ್ಯಾದುದಾರರ ಕೋರಿಕೆಯ ಮೇರೆಗೆ ನಿಪಿ–22 ಮತ್ತು 24 ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮನೆಯೂ ಇರಲಿಲ್ಲ ಯಾವುದೇ ನಷ್ಟವು ಅಲ್ಲಿ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ಮಾಡಿದಾಗ ಸ್ಥಳದಲ್ಲಿ ಖಾಲಿ ನಿವೇಶನ ಇತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**